

ಡಾ.ವಿನೋದ ಛೆಬ್ಬಿ

ಗಂಡಸು ಹೆಣ್ಣಿನ ಪ್ರಭಾವವನ್ನು ಧನಾತ್ಮಕವಾಗಿ ಒಪ್ಪಿಕೊಳ್ಳುವುದು ದಾಂಪತ್ಯದ ಭದ್ರತೆಯ ಸೂಚನೆ!

# 98: ಸ್ವಂತ ಸಾಂತ್ವನ ಹೇಗೆ?

ಲೂಸಿಯಲ್ಲಿ ಬದಲಾವಣೆ ಆದಂತೆ ಲೋಚನನಲ್ಲೂ ಬದಲಾವಣೆ ಅಗತ್ಯವೆಂದು ಹೋದಸಲ ಮಾತಾಡಿಕೊಂಡೆವು. ಆದರೆ ಲೋಚನ ಹೌದೆಂದರೂ ಅವನ ದೇಹಭಾಷೆಯು ನಾನಿನ್ನೂ ತಯಾರಾಗಿಲ್ಲ ಎಂದು ಸೂಚಿಸಿತು. ಇದರ ಕಾರಣ ಲೋಚನನಲ್ಲಿರುವ ಬಹುವ್ಯಕ್ತಿತ್ವಗಳ ನಡುವೆ ನಡೆಯುವ ಗೊಂದಲಕರ, ಘರ್ಷಣೆಯಿಂದ ಕೂಡಿದ ವ್ಯವಹಾರ ಎಂಬುದು ಸ್ಪಷ್ಟವಾಗಿದೆ.

'ಲೋಚನ್, ಲೂಸಿ ಹೇಗೆ ನಡೆದುಕೊಂಡರೂ ನಿಮ್ಮ ಪಾಲಿನ ಸ್ತಿಮಿತವನ್ನು ಕಾಪಾಡಿಕೊಳ್ಳುವುದು ಹೇಗೆ ಸಾಧ್ಯ ಎಂದು ಪ್ರಶ್ನಿಸಿದಿರಿ. ಯಾಕೆ ಸಾಧ್ಯವಾಗುವುದಿಲ್ಲ ಎಂದು ನೀವೇ ವಿವರಿಸುತ್ತೀರಾ?'

ಲೋಚನ್ ಯೋಚಿಸುತ್ತ ಹೇಳಿದ. 'ಯಾಕೆಂದರೆ, ಲೂಸಿ ನನ್ನ ಮೇಲೆ ತನ್ನ ವಿಚಾರ ಹೇರುವುದು ನನಗೆ ಆಗುವುದಿಲ್ಲ. ಅದನ್ನು ವಿರೋಧಿಸಬೇಕು ಅನ್ನಿಸುತ್ತದೆ.'

'ಆಕೆಯ ವಿಚಾರ ಸರಿಯಿದ್ದರೂ ಅದನ್ನು ಅನುಸರಿಸಬಾರದು ಎಂದು ಕೆಲವೊಮ್ಮೆ ಅನ್ನಿಸುತ್ತದೆ. ಅಲ್ಲವೆ? (ತಲೆ ಅಲ್ಲಾಡಿಸಿದ.) ಸರಿಯಿದ್ದರೂ ಅನುಸರಿಸಬಾರದು ಎನ್ನುವುದು ಮೊಟ್ಟಮೊದಲು ಯಾವಾಗಿನಿಂದ ಶುರುವಾಯಿತು? ಬಾಲ್ಯದಲ್ಲಿ? ಸ್ವಲ್ಪ ನೆನಪುಮಾಡಿಕೊಳ್ಳುತ್ತೀರಾ?'

ಲೋಚನ ಬಾಲ್ಯವನ್ನು ನೆನಪಿಸಿಕೊಂಡ. ಬಾಲಕನಾಗಿ ಸುತ್ತಲಿನ ಜಗತ್ತನ್ನು ಕಂಡುಹಿಡಿಯುವ ತನ್ನ ಅದಮ್ಯ ಆಸೆಯನ್ನು ತನ್ನಪ್ಪ ಹೇಗೆ ಕಮರಿಸಿದ ಎಂದು ಹೇಳಿಕೊಂಡ. ದಮನಿಸುವ ಅಪ್ಪನ ಪ್ರಭಾವಕ್ಕೆ ಒಳಗಾಗಿ ಸ್ವಚ್ಛಂದ ಬಾಲಕ ತನ್ನಿಷ್ಟಕ್ಕೆ ವಿರೋಧವಾಗಿ ವಿಧೇಯತೆ ತಂದುಕೊಂಡದ್ದು ಹೇಗೆ ಎಂದು ಹೇಳಿಕೊಂಡ. ಘಟನೆಯ ಮೇಲೆ ಘಟನೆಯನ್ನು ವಿವರಿಸುತ್ತ ಉದ್ವೇಗಗೊಂಡ. ನಡುನಡುವೆ ನಿಲ್ಲಿಸಿ ಬಿಕ್ಕಳಿಸಿದ. ಎಲ್ಲ ಮುಗಿದ ನಂತರ ವಿಷಣ್ಣತೆಯಿಂದ ಸುಮ್ಮನಾದ. ಅವನ ಕಥೆ ಕೇಳುತ್ತ ಕೇಳುತ್ತ ಲೂಸಿ ಮೌನವಾಗಿ ಅಳುತ್ತಿದ್ದಳು. ನನ್ನ ಕಣ್ಣಲ್ಲೂ ನೀರಾಡಿತು. ಲೋಚನನ ಮೊಳಕಾಲ ಮೇಲೆ ಕೈಯಿಟ್ಟು ತಟ್ಟುತ್ತ ಸಾಂತ್ವನದ ಮಾತಾಡಿದೆ.

ಲೋಚನನಿಗೆ ತಲೆಯೊಳಗೆ ಕೂತುಕೊಂಡ ಅಪ್ಪನ ಹಿಡಿತದಿಂದ ಹೊರಬರಲು ನೆರವು ಬೇಕು. ಅವನು ತನ್ನ ಬಾಲ್ಯದ ಸ್ವಚ್ಛಂದತೆಯನ್ನು ಅನುಭವಿಸಲು ಅವಕಾಶ ಒದಗಿಸಬೇಕು. ನಾನು ಕೇಳಿದೆ. 'ಲೋಚನ್, ಯಾವುದಾದರೂ ಅನಾಥ ಮಕ್ಕಳನ್ನು ನೋಡಿದ್ದೀರಾ?'

ಲೂಸಿ ನಡುವೆ ಮಾತಾಡಿದಳು. 'ಹೌದು ಡಾಕ್ಟರ್. ಇವನಿಗೆ ಭಿಕ್ಷೆ ಬೇಡುವ ಮಕ್ಕಳನ್ನು ಕಂಡರೆ ಕರಗಿಬಿಡುತ್ತಾನೆ. ಅಯ್ಯೋಪಾಪ ಎಂದು ಕೈಗೆ ಸಿಕ್ಕಿದಷ್ಟು ದುಡ್ಡು ಕೊಟ್ಟು ಕಳಿಸಿಕೊಡುತ್ತಾನೆ.' ಆಕೆಯ ಮಾತಿಗೆ ಲೋಚನ ಸಮ್ಮತಿ ಸೂಚಿಸಿದ.

ನಾನು ಹೇಳಿದೆ. 'ಹೀಗೆ ಕಲ್ಪಿಸಿಕೊಳ್ಳಿ. ನಿಮ್ಮೆದುರು ಒಬ್ಬ ಬಾಲಕ ನಿಂತಿದ್ದಾನೆ. ಬಾಲ್ಯದಲ್ಲಿ ತನ್ನಪ್ಪನ ಒತ್ತಡದಿಂದ ತಾನೇನು ಆಗಬೇಕಿತ್ತು ಹಾಗಾಗದೆ ತನ್ನತನವನ್ನು ಕಳೆದುಕೊಂಡು ಏನೋ ಆಗಿಬಿಟ್ಟಿದ್ದಾನೆ. ಹೀಗಾಗಿದ್ದು ಅವನಿಗೆ ಸ್ವಲ್ಪವೂ ಸರಿಬಂದಿಲ್ಲ. ಅದರಿಂದ ಹೊರಬರಲು ಹೆಣಗಿ ಸೋತು, ಹತಾಶೆ ಹೊಂದಿದ್ದಾನೆ. ಅನುಭವಿಸಿದ್ದನ್ನೇ ಅನುಭವಿಸುತ್ತ ಒತ್ತಡಕ್ಕೆ ಒಳಗಾಗುತ್ತಿದ್ದಾನೆ. ಈ ಬಾಲಕ ದೈನ್ಯತೆಯಿಂದ ನಿಮ್ಮಕಡೆ ಕೈಚಾಚಿ ಸಹಾಯ ಯಾಚಿಸುತ್ತಿದ್ದಾನೆ... (ಲೋಚನ ಕೇಳುತ್ತ ಕೇಳುತ್ತ ಕಣ್ಣುಮುಚ್ಚಿಕೊಂಡ.) ಅವನಿಗೆ ಏನೇನು ಹೇಳುತ್ತೀರಿ? ಹೇಗೆ ಸಾಂತ್ವನ ಮಾಡುತ್ತೀರಿ? ಯಾವರೀತಿ ನೆರವು ನೀಡುತ್ತೀರಿ? ಈ ಇಕ್ಕಟ್ಟಿನಿಂದ ಹೊರಗೆ ಹೇಗೆ ತರುತ್ತೀರಿ?' ಉತ್ತರಕ್ಕಾಗಿ ಕಾಯ್ದೆ.

ಲೋಚನನ ಕಣ್ಣುಗಳಿಂದ ನೀರು ಇಳಿಯಿತು. ನಿಧಾನವಾಗಿ ಮಾತಾಡಿದ. 'ಅವನನ್ನು ತಬ್ಬಿಕೊಳ್ಳುತ್ತೇನೆ. ಪ್ರೀತಿಯಿಂದ ಮಾತಾಡುತ್ತೇನೆ. ಚಿಂತೆ ಮಾಡಬೇಡ ಮಗೂ, ನಾನಿದ್ದೇನೆ ನಿನಗೆ. ನಿನಗೇನು ಬೇಕು ಹೇಳು ಕೊಡಿಸುತ್ತೇನೆ...' ಎಂದು ಮುಂತಾಗಿ ಮಾತಾಡುತ್ತ ಭಾವಪರವಶನಾಗಿ ಬಿಕ್ಕಳಿಸಿದ.

ಲೋಚನ ಚೇತರಿಸಿಕೊಂಡ ನಂತರ ಕೇಳಿದೆ: 'ಆ ಹುಡುಗನನ್ನು ಸಂತೈಸಿದಿರಿ. ಪ್ರೀತಿ ಕೊಟ್ಟಿರಿ. ಅದರಿಂದ ಅವನಿಗೆ ಏನು ಉಪಯೋಗ ಆದೀತು ಅಂತ ಹೇಳುತ್ತೀರಾ?'

ನನ್ನ ಸ್ವರದಲ್ಲಿ ಸಂದೇಹವನ್ನು ಗುರುತಿಸಿದ ಎಂದು ಕಾಣುತ್ತದೆ. 'ಯಾಕಿಲ್ಲ, ತುಂಬಾ ಉಪಯೋಗ ಆಗುತ್ತದೆ. ಅವನಿಗೆ ತನ್ನನ್ನು ಪ್ರೀತಿಸುವವರು, ತನ್ನ ಬಯಕೆಗೆ ಬೆಲೆ ಕೊಡುವವರು, ಅವನಿಗೆ ತನ್ನಿಷ್ಟ ಬಂದಂತೆ ಇರಲು ಪ್ರೋತ್ಸಾಹಿಸುವವರು ಇದ್ದಾರೆ ಎಂದು ಅನ್ನಿಸಿತಲ್ಲ? ಇದು ಅವನಿಗೆ ತುಂಬಾ ಸಹಾಯ ಆಗುತ್ತದೆ!' ಅವನ ಮುಖದಲ್ಲಿ ಹಠಭರಿತ ಲವಲವಿಕೆ ಕಾಣಿಸಿತು.

ನಾನು ಕೇಳಿದೆ: 'ಈಗ ಲೋಚನ್, ಆ ಹುಡುಗ ನೀವೇ ಆಗಿದ್ದೀರಿ ಎಂದುಕೊಳ್ಳಿ. ನಿಮ್ಮನ್ನು ನೀವು ಸಂತೈಸಿಕೊಳ್ಳಬಹುದೆ? ನಿಮಗೆ ನೀವೇ ನೆರವು ನೀಡಬಹುದೆ? ನಿಮ್ಮನ್ನು ನೀವೇ ಪ್ರೀತಿಸಬಹುದೆ? ಯೋಚಿಸಿ.'

ಲೋಚನ ಗಂಭೀರನಾಗಿ ಯೋಚನೆಯಲ್ಲಿ ಬಿದ್ದ. ಆಮೇಲೆ ತಲೆಯೆತ್ತಿ ಹೌದು, ಸಾಧ್ಯವಿದೆ ಎಂದು ಹೇಳಿದ. ಈಗವನು ಬೆಳೆದು ಪ್ರಬುದ್ಧನಾಗಿರುವುದರಿಂದ ತನ್ನಿಷ್ಟಗಳಿಗೆ ತಾನು ಬೆಲೆಕೊಡಬಹುದು, ತಾನು ಹಣ ಸಂಪಾದನೆ ಮಾಡುತ್ತಿರುವುದರಿಂದ ತನ್ನ ಬಯಕೆಗಳನ್ನು ತಾನೇ ಪೂರೈಸಿಕೊಳ್ಳಬಹುದು ಎಂದ.

ನಂತರ ಸುಮಾರು ಹೊತ್ತು ನಾವು ಮೂವರೂ ತಮಾಷೆಯ ಚರ್ಚೆಯಲ್ಲಿ ಕಾಲ ಕಳೆದೆವು. ಲೋಚನ ಬಾಲಕನಾಗಿದ್ದಾಗ ಬಯಸಿದ್ದ ವಿಷಯಗಳನ್ನು ಕುರಿತು ಲೂಸಿ ಉತ್ಸಾಹದಿಂದ ಪಟ್ಟಿಮಾಡಿದಳು. ಉದಾಹರಣೆಗೆ, ಹೊಸ ಊರು ನೋಡಬೇಕು, ರಸ್ತೆಬದಿಯಲ್ಲಿ ನಿಂತು ಪಾನಿಪೂರಿ ತಿನ್ನಬೇಕು, ಬೀದಿ ಬೀದಿ ಸುತ್ತಬೇಕು, ಕೇಸರಿ ಬಿಳಿ ಬಣ್ಣದ ಟೀ ಶರ್ಟ್ ಧರಿಸಬೇಕು. ಮೋಟರ್ ಸೈಕಲ್ ರಿಪೇರಿ ಮಾಡುವುದನ್ನು ನೋಡುತ್ತ ನಿಲ್ಲಬೇಕು, ನಾಯಿಮರಿಯ ಜೊತೆಗೆ ಆಟವಾಡಬೇಕು,... ಇತ್ಯಾದಿ. ಅದನ್ನೆಲ್ಲ ಪೂರೈಸಲು ನಾನೊಂದು ಸಲಹೆ ಕೊಟ್ಟೆ. ಲೋಚನ ಒಂದು ತಿಂಗಳು ರಜೆ ಹಾಕಿ, ಇಡೀ ತಿಂಗಳು ತನಗೆ ಬೇಕಾದಂತೆ ಕಳೆಯಲಿ. ಈ ಇಬ್ಬರಿಗೂ ಯೋಚನೆ ಹಿಡಿಸಿತು. ಅವನ ಸಂಪಾದನೆಯಲ್ಲಿ ಆಗುವ ಕೊರತೆಯನ್ನು ಲೂಸಿ ಸರಿದೂಗಿಸುವ ಭರವಸೆ ಕೊಟ್ಟಳು. ಇಬ್ಬರೂ ಸೇರಿ ಮಾರಿಶಿಯಸ್ ದ್ವೀಪಗಳಿಗೆ ಹೋಗುವುದೆಂದು ತೀರ್ಮಾನ ಮಾಡಿದರು. ಪ್ರಯಾಣದ ಯೋಜನೆಯನ್ನು ಲೂಸಿ ಮಾಡುತ್ತೇನೆ ಎಂದಾಗ, 'ಹೌದು, ನೀನೇ ಮಾಡು. ಎಲ್ಲಿ ಏನು ಯಾವಾಗ ಎನ್ನುವ ಲಾಜಿಸ್ಟಿಕ್ಸ್ ನನಗಿಂತ ನಿನಗೇ ಹೆಚ್ಚು ಗೊತ್ತು.' ಎಂದ.

ಇಲ್ಲೇನು ನಡೆಯುತ್ತಿದೆ? ಲೂಸಿ ಹೇಳುವುದಕ್ಕೆಲ್ಲ ಲೋಚನ ಉತ್ಸಾಹದಿಂದ ಒಪ್ಪುತ್ತಿದ್ದಾನೆ. ಅಂದರೆ ಅವಳ ಪ್ರಭಾವವನ್ನು ಒಪ್ಪಿಕೊಳ್ಳುತ್ತಿದ್ದಾನೆ! ಗಂಡಸು ಹೆಣ್ಣಿನ ಪ್ರಭಾವಕ್ಕೆ ಧನಾತ್ಮಕವಾಗಿ ಒಳಗಾಗಿ ಒಪ್ಪಿಕೊಳ್ಳುವುದು ದಾಂಪತ್ಯದ ಭದ್ರತೆಯ ಸೂಚನೆಯೆಂದು ಜಾನ್ ಗಾಟ್ಮನ್ ಹೇಳಿದ್ದು ನೆನಪಾಯಿತು.

ಲೂಸಿ ಲೋಚನ ಧನ್ಯವಾದಗಳೊಂದಿಗೆ ಬೀಳ್ಕೊಡುವಾಗ ನಾನು ಲೋಚನನನ್ನು ಕೇಳಿದೆ: 'ಇಲ್ಲಿಂದ ಹೊರಟ ನಂತರ ನೀವು ಪೂರೈಸಿಕೊಳ್ಳುವ ಮೊಟ್ಟಮೊದಲ ಇಷ್ಟ ಯಾವುದು?' ಅವನು ತುಂಟನಗೆಯೊಂದಿಗೆ ಉತ್ತರಿಸಿದ. 'ಬುಗುರಿ. ಮನೆಗೆ ಹೋಗ್ತಾ ಹಾದಿಯಲ್ಲಿ ಬುಗುರಿ ಕೊಳ್ಳುತ್ತೇನೆ!'

ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (ಬೆಳಿಗ್ಗೆ 11ರಿಂದ ಸಂಜೆ 5ರ ತನಕ) ಲೇಖಕರ ವಿಳಾಸ: www.medisex.org